ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.

ಸಂಖ್ಯೆ:ಪಪೂಶಿ/ಶೈಶಾ-04/ ಸು-4/2012-13 ದಿನಾಂಕ: .05.2015.

## ಸುತ್ತೋಲೆ

ವಿಷಯ: ವಿದ್ಯಾರ್ಥಿನಿಯರ ಮೇಲಿನ ಲೈಂಗಿಕ ಕಿರುಕುಳ, ಅತ್ಯಾಚಾರ ಮತ್ತು ಇತರೆ ದೌರ್ಜನ್ಯಗಳನ್ನು ತಡೆಗಟ್ಟುವ ಕ್ರಮ ಕುರಿತು.

ಉಲ್ಲೇಖ: 1. ಅಪರ ಮುಖ್ಯ ಕಾರ್ಯದರ್ಶಿಯವರ ಅರೆ ಸರ್ಕಾರಿ ಪತ್ರ ಸಂಖ್ಯೆ: ಹೆಚ್‌ಡಿ 64 ಸಿಐಡಿ 2013, ದಿನಾಂಕ 23.06.2013.

2. ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಸಾಮಾನ್ಯ), ಇವರ ಪತ್ರ ಸಂಖ್ಯೆ: ಇಡಿ 103 ಎಸ್‌ಟಿಬಿ 2013, ದಿನಾಂಕ: 24.08.2013.

********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರದ ಉಲ್ಲೇಖ (1)ರ ಪತ್ರದಲ್ಲಿ ವಿದ್ಯಾರ್ಥಿಗಳ ಮೇಲಿನ ಲೈಂಗಿಕ ಕಿರುಕುಳ, ಅತ್ಯಾಚಾರ ಮತ್ತು ಇತರೆ ದೌರ್ಜನ್ಯಗಳನ್ನು ತಡೆಗಟ್ಟುವ ಕುರಿತು ಕೂಡಲೇ ಕ್ರಮ ಜರುಗಿಸುವಂತೆ ಸೂಚಿಸಿರುತ್ತಾರೆ. ಅದರಂತೆ ಈ ಕೆಳಕಂಡ ನಿಬಂಧನೆಗಳನ್ನು ರಾಜ್ಯದ ಸರ್ಕಾರಿ/ ಅನುದಾನಿತ ಹಾಗೂ ಅನುದಾನರಹಿತ ಪದವಿ ಪೂರ್ವ ಕಾಲೇಜುಗಳಲ್ಲಿನ ಪ್ರಾಂಶುಪಾಲರು/ ಆಡಳಿತ ಮಂಡಳಿಯವರು ವಿದ್ಯಾರ್ಥಿನಿಯರ ಮೇಲಿನ ಲೈಂಗಿಕ ಕಿರುಕುಳ, ಅತ್ಯಾಚಾರ ಮತ್ತು ಇತರೆ ದೌರ್ಜನ್ಯಗಳನ್ನು ತಡೆಗಟ್ಟುವ ಕುರಿತು ಖುದ್ದಾಗಿ ಗಮನ ವಹಿಸುವಂತೆ ಹಾಗೂ ಕೈಗೊಂಡ ಕ್ರಮದ ಬಗ್ಗೆ ವಿವರಗಳನ್ನು/ವರದಿಗಳನ್ನು ಪ್ರತಿಗಳನ್ನು ನಿರ್ದೇಶನಾಲಯಕ್ಕೆ ಹಾಗೂ ಸರ್ಕಾರಕ್ಕೆ ನೀಡುವಂತೆ ಸೂಚಿಸಿದೆ.

ಉಲ್ಲೇಖ-02ರಲ್ಲಿ ಹೆಣ್ಣು ಮಕ್ಕಳು ವ್ಯಾಸಂಗ ಮಾಡುತ್ತಿರುವ ಶಾಲಾ/ ಕಾಲೇಜುಗಳಲ್ಲಿ ಮಹಿಳಾ ವಿದ್ಯಾರ್ಥಿನಿಯರ ಮೇಲಿನ ಲೈಂಗಿಕ ಕಿರುಕುಳ, ಅತ್ಯಾಚಾರ ಮತ್ತು ಇತರೆ ದೌರ್ಜನ್ಯಗಳು ನಡೆಯುತ್ತಿರುವ ಬಗ್ಗೆ ತಡವಾಗಿ ದೂರುಗಳನ್ನು ವಿದ್ಯಾರ್ಥಿನಿಯರು/ ಪೋಷಕರು ಸರ್ಕಾರಕ್ಕೆ ದಾಖಲಿಸಿರುವ ಕುರಿತು ಸರ್ಕಾರದ ಗಮನಕ್ಕೆ ಬಂದಿರುವುದಾಗಿ ತಿಳಿಸಿರುತ್ತಾರೆ. ಆದ್ದರಿಂದ ವಿದ್ಯಾರ್ಥಿನಿಯರು ವ್ಯಾಸಂಗ ಮಾಡುವ ಪದವಿ ಪೂರ್ವ ಕಾಲೇಜುಗಳಲ್ಲಿ ಹೆಣ್ಣು ಮಕ್ಕಳ ಸುರಕ್ಷತೆಯ ಕುರಿತು ಹೆಚ್ಚು ಗಮನ ಹರಿಸಬೇಕಾಗಿರುತ್ತದೆ. ರಾಜ್ಯದ ಸರ್ಕಾರಿ/ಅನುದಾನಿತ ಹಾಗೂ ಅನುದಾನರಹಿತ ಪದವಿ ಪೂರ್ವ ಕಾಲೇಜುಗಳಲ್ಲಿನ ಪ್ರಾಂಶುಪಾಲರು/ ಆಡಳಿತ ಮಂಡಳಿಯವರು ಹೆಣ್ಣು ಮಕ್ಕಳ ಸುರಕ್ಷತೆಗಾಗಿ ಈ ಕೆಳಕಂಡ ಅಗತ್ಯ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಸೂಚಿಸಿದೆ.

1. ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿರುವ ಸರ್ಕಾರಿ/ಅನುದಾನಿತ /ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳ ವಿವರವನ್ನು ಕುರಿತು ಹತ್ತಿರದಲ್ಲಿ ಆರಕ್ಷಕಠಾಣೆಗೆ ಮಾಹಿತಿಯನ್ನು ಸಲ್ಲಿಸಿ ರಕ್ಷಣೆ ಕೋರುವುದು ಕಡ್ಡಾಯ. ವಿದ್ಯಾರ್ಥಿನಿಯರು ಹಾಗೂ ವಿದ್ಯಾರ್ಥಿನಿಯರ ಪೋಷಕರು, ಅವರು ವ್ಯಾಸಂಗ ಮಾಡುತ್ತಿರುವ ಪದವಿ ಪೂರ್ವ ಕಾಲೇಜಿನ ಹತ್ತಿರದ ಪೋಲಿಸ್ ಠಾಣೆಯ ದೂರವಾಣಿ ಸಂಖ್ಯೆ ಮತ್ತು ಮಕ್ಕಳ ಸಹಾಯವಾಣಿ 1098 ಇವುಗಳನ್ನು ತಮ್ಮ ಬಳಿ ಇಟ್ಟುಕೊಳ್ಳುವುದು ಅವಶ್ಯಕವಾಗಿರುತ್ತದೆ.
2. ಬಾಲಕಿಯರು/ವಿದ್ಯಾರ್ಥಿನಿ ಹಾಗೂ ಮಹಿಳಾ ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿರುವ ಪದವಿ ಪೂರ್ವ ಕಾಲೇಜುಗಳಲ್ಲಿ ಮಹಿಳಾ ಸಮಿತಿಯನ್ನು ಕಡ್ಡಾಯವಾಗಿ ರಚನೆ ಮಾಡುವುದು. ಈ ಸಮಿತಿಯಲ್ಲಿ ಪ್ರಾಂಶುಪಾಲರು, ಒಬ್ಬರು ಉಪನ್ಯಾಸಕಿಯರು, ಒಬ್ಬ ಮಹಿಳಾ ಸಿಬ್ಬಂದಿ ಹಾಗೂ ಅವಶ್ಯವಿದ್ದರೆ ಸಾಮಾಜಿಕ ಹೋರಾಟಗಾರರು, ಪೋಷಕರನ್ನು

ಸದಸ್ಯರನ್ನಾಗಿ ನೇಮಿಸಿಕೊಂಡು ಪ್ರತಿ ತಿಂಗಳು ಸಭೆ ನಡೆಸಿ ವಿದ್ಯಾರ್ಥಿನಿಯರಿಗೆ ಯಾವುದಾದರು ತೊಂದರೆ ಮತ್ತು ದೂರುಗಳಿದ್ದರೆ ನಿವಾರಿಸುವುದು. ಮಕ್ಕಳ ಮತ್ತು ಮಹಿಳೆಯರ ಮೇಲೆ ನಡೆಯುತ್ತಿರುವ ಮಾನಸಿಕ ಹಿಂಸೆ, ಅತ್ಯಾಚಾರ, ದೌರ್ಜನ್ಯದ ವಿರುದ್ಧ ಧ್ವನಿ ಎತ್ತುವುದು ಹಾಗೂ ಅದನ್ನು ತಡೆಗಟ್ಟುವ ಸಲುವಾಗಿ ತಜ್ಞಾರಿಂದ ವಿದ್ಯಾರ್ಥಿನಿಯರಿಗೆ ಸೂಕ್ತ ಸಲಹೆ ಮತ್ತು ಮಾರ್ಗದರ್ಶನ ನೀಡಿ. ಈ ಮಹಿಳಾ ಸಮಿತಿಯ ಎಲ್ಲಾ ವಿವರವನ್ನು ಸೂಚನಾ ಫಲಕದಲ್ಲಿ ಪ್ರಕಟಿಸುವುದು.

3. ವಿದ್ಯಾರ್ಥಿನಿಯರು ವ್ಯಾಸಂಗ ಮಾಡುವ ಪ್ರತಿ ಪದವಿ ಪೂರ್ವ ಕಾಲೇಜಿನಲ್ಲಿ ರಚನೆಯಗಿರುವ ಮಹಿಳಾ ದೂರು ನಿವಾರಣ ಸಮಿತಿಗೆ ಬಾಲಕಿಯರು/ವಿದ್ಯಾರ್ಥಿನಿ ಹಾಗೂ ಮಹಿಳಾ ಸಿಬ್ಬಂದಿಗಳಿಗೆ ಯಾರದರು ಲೈಂಗಿಕ ಕಿರುಕುಳ, ಅತ್ಯಾಚಾರ ಮತ್ತು ಇತರೆ ದೌರ್ಜನ್ಯಗಳು ನೀಡಿದ್ದಲ್ಲಿ ಅವರುಗಳು ಯಾವುದೇ ಭಯ ಮತ್ತು ಅತಂಕ ಪಡೆದೆ ದೂರನ್ನು ದಾಖಲಿಸುವಂತೆ ಸೂಚನೆಯನ್ನು ನೀಡುವುದು.
4. ಪದವಿ ಪೂರ್ವ ಕಾಲೇಜುಗಳಲ್ಲಿ/ವಸತಿ ಸಹಿತಿ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರತಿ ತಿಂಗಳಿಗೊಮ್ಮೆ ಅಥವಾ ಎರಡು ತಿಂಗಳಿಗೊಮ್ಮೆ ಬಾಲಕಿಯರು/ವಿದ್ಯಾರ್ಥಿನಿ ಹಾಗೂ ಮಹಿಳಾ ಸಿಬ್ಬಂದಿ ಮತ್ತು ಪೋಷಕರನ್ನು ಕರೆದು ಸಭಯನ್ನು ನಡೆಸುವುದು ಕಡ್ಡಾಯವಾಗಿರುತ್ತದೆ.
5. ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿನಿಯರು ಯಾವುದೇ ಕಾರಣಕ್ಕೂ ತಮ್ಮ ವೈಯಕ್ತಿಕ ವಿವರಗಳನ್ನು ಬೇರೆಯವರೊಂದಿಗೆ ಅತೀಮುಖ್ಯವಾಗಿ ಮೊಬೈಲ್ ಮೂಲಕ ಅಥವಾ ಇತರೆ ಸಾಮಾಜಿಕ ಜಾಲದ ಮೂಲಕ ಹಂಚಿಕೊಳ್ಳಬಾರದು ಎಂಬುದರ ಬಗ್ಗೆ ಅರಿವು ಮೂಡಿಸುವುದು.
6. ಕಾಲೇಜಿನ ಅವರಣದಲ್ಲಿ ಹಾಗೂ ಸುತ್ತಮುತ್ತಲಲ್ಲಿ ವಿದ್ಯಾರ್ಥಿನಿಯರು ಮಾಧಕ ವಸ್ತು, ಧೂಮಪಾನ, ಮಾದಕ ದ್ರವ್ಯಗಳನ್ನು ದುರುಪಯೋಗ ಹಾಗೂ ಅವುಗಳನ್ನು ಮಾರಠಮಾಡುವ ವ್ಯಕ್ತಿಗಳ ಸಂಪರ್ಕದಿಂದ ದೂರ ಇರುವಂತೆ ಬಾಲಕಿಯರು/ವಿದ್ಯಾರ್ಥಿನಿಯರಿಗೆ ಮಾರ್ಗದರ್ಶನವನ್ನು ನೀಡುವುದು.
7. ಅಧಿಕೃತವಾಗಿ ಭದ್ರತೆಗೆ ಲೈಸೆನ್ಸ್ ಪಡೆದ ಏಜನ್ಸಿಗಳ ಮೂಲಕ ಭದ್ರತಾ ಸಿಬ್ಬಂದಿಗಳನ್ನು ನೇಮಿಸಿಕೊಳ್ಳುವುದು.
8. ಭದ್ರತಾಸಿಬ್ಬಂದಿಗಳನ್ನು ಮೂರು ತಿಂಗಳಿಗೊಮ್ಮೆ ಕಡ್ಡಾಯವಾಗಿ ಬದಲಾಯಿಸಿಕೊಳ್ಳುವುದು.
9. ಕಾಲೇಜು/ವಸತಿಗೃಹಗಳಲ್ಲಿ ಸಾಕಷ್ಟು ಬೆಳಕನ್ನು ಎಲ್ಲಾ ಕೋಣೆಗಳಲ್ಲಿಯೂ ಲಭ್ಯವಿರುವಂತೆ ನೋಡಿಕೊಳ್ಳುವುದು ಅತೀ ಮುಖ್ಯವಾಗಿರುತ್ತದೆ.
10. ಪದವಿ ಪೂರ್ವ ಕಾಲೇಜುಗಳ ಮುಖ್ಯದ್ವಾರ, ತರಗತಿ ಕೊಠಡಿಗಳು, ಪ್ರಯೋಗಶಾಲೆಗಳು, ಕ್ರೀಡಾ ಕೊಠಡಿ, ಗ್ರಾಂಥಾಲಯ, ವಾಚನಾಲಯ, ಶೌಚಾಲಯದ ಹತ್ತಿರ ಹಾಗೂ ಇತರೆ ಮುಖ್ಯ ಸ್ಥಳಗಳಲ್ಲಿ ಸಿಸಿಟಿವಿ ಹಾಗೂ ಇತರೆ ಕಣ್ಗಾವಲು ಸಮಗ್ರಿಗಳನ್ನು ಮುಖ್ಯವಾದ ಸ್ಥಳಗಳಲ್ಲಿ ಅಳವಡಿಸಿ ಅದರ ಕಾರ್ಯಭಾರವನ್ನು ನಿರ್ವಹಿಸಲು ಅದಕ್ಕಾಗಿಯೇ ಇಬ್ಬರು ಸಿಬ್ಬಂದಿಗಳನ್ನು ನೇಮಿಸುವುದು ಕಡ್ಡಾಯವಾಗಿರುತ್ತದೆ.
11. ಕಾಲೇಜಿನ ವೇಳೆ ಮುಗಿದ ನಂತರ ಅನಿವಾರ್ಯ ಸಂಧರ್ಭದಲ್ಲಿ ವಿದ್ಯಾರ್ಥಿಗಳು ವ್ಯಾಸಂಗಕ್ಕಾಗಿ, ಗ್ರಾಂಥಾಲಯ/ ಇಲಾಖೆಗೆ ಹೋಗಿ ಹಿಂದಿರುಗಲು ತಡವಾದಲ್ಲಿ ಅಂತಹ ಸಮಯದಲ್ಲಿ ವಿದ್ಯಾರ್ಥಿನಿಯರ ಸುರುಕ್ಷೆತೆಗೆಗಾಗಿ ಅವರಿಗೆ ಸಂಸ್ಥೆಯಲ್ಲಿರುವ ವಾಹನಗಳನ್ನು ಮಾತ್ರ ಉಪಯೋಗಿಸಿಕೊಳ್ಳಲು ಅನುಕೂಲ ಮಾಡಿಕೊಡುವುದು. ವಾಹನಗಳಲ್ಲಿ ತೆರಲುವ ಸಂಧರ್ಭದಲ್ಲಿ ಮೊದಲು ವಿದ್ಯಾರ್ಥಿನಿಯನ್ನು ಸುರಕ್ಷೆತೆಯಾಗಿ ಅವರನ್ನು ಅವರ ಸ್ಥಳಕ್ಕೆ ಸೇರಿಸಿದ ನಂತರವೇ ಉಳಿದ ವಿದ್ಯಾರ್ಥಿಗಳ ಹಾಗೂ ಸಿಬ್ಬಂದಿಗಳಿಗೆ ಅನುಕೂಲವನ್ನು ಮಾಡಿಕೊಡುವಂತೆ ಸೂಚಿಸುವುದು.

12. ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರು/ಆಡಳಿತ ಮಂಡಳಿಯವರು ಬಾಲಕಿಯರು/ ವಿದ್ಯಾರ್ಥಿನಿಯರನ್ನು ಕ್ರೀಡಾ ಸ್ಪರ್ಧೆಗಳಿಗೆ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಶೈಕ್ಷಣಿಕ ಪ್ರವಾಸಗಳ ತಾನಗಳಿಗೆ ಕರೆದುಕೊಂಡು ಹೋಗುವ ಸಂಧರ್ಭಗಳಲ್ಲಿ ಕಡ್ಡಾಯವಾಗಿ ಮಹಿಳಾ ಸಿಬ್ಬಂದಿಗಳನ್ನು ಅವರೊಂದಿಗೆ ಕಳುಹಿಸಿ ವಿದ್ಯಾರ್ಥಿನಿಯರ ಸುರಕ್ಷತೆಯನ್ನು ಕಾಪಾಡಬೇಕು.
13. ಬಾಲಕಿಯರು/ ವಿದ್ಯಾರ್ಥಿನಿಯರು ಕಾಲೇಜುಗಳಿಂದ ಬರುವ ಮತ್ತು ಮನೆಗೆ ಹಿಂದಿರುಗಿ ಹೋಗುವ ಸಮಯದಲ್ಲಿ ಒಬ್ಬೊಬ್ಬರೆ ಬಂದು ಹೋಗುವ ಬದಲು ಗುಂಪಿನಲ್ಲಿ ಬರುವ ಮತ್ತು ಹೋಗುವಂತೆ ಸೂಚಿಸುವುದು.
14. ಕಾಲೇಜಿನ ಅವಧಿ ನಂತರ ಹಾಗೂ ತಡರಾತ್ರಿ ಕಾಲೇಜಿನ ಸಮಯ ಮುಗಿಯುವ ಮೊದಲು ಕಾಲೇಜಿನ ಕ್ಯಾಂಪಸನ್ನು ಸುತ್ತಲು ಸುರಕ್ಷಾ ಸಿಬ್ಬಂದಿಗಳು ಕಾಲೇಜುನ್ನು ಗಸ್ತು ಹಾಗುವಂತೆ ಸೂಚಿಸುವುದು.
15. ವಸತಿಗಳಲ್ಲಿ ಇರುವ ವಿದ್ಯಾರ್ಥಿನಿಯರನ್ನು ನೋಡಲು/ ಭೇಟಿ ಮಾಡಲು ಬರುವ ಸಂದರ್ಶಕರು ಕಡ್ಡಾಯವಾಗಿ ಸಂದರ್ಶಕರ ಮಾಸಿಕ ಪುಸ್ತಕದಲ್ಲಿ ವಿವರವನ್ನು ನಮೂದಿಸಬೇಕು. ಒಂದು ವೇಳೆ ವಿದ್ಯಾರ್ಥಿನಿಯರು ಅವರೊಂದಿಗೆ ತೆರಲುವ ಸಮಯದಲ್ಲಿ ಪೂರ್ಣ ಅಂಚೆ ವಿಳಾಸ ಅವರ ಗುರುತ್ತಿನಚೀಟಿ ಪ್ರತಿಯನ್ನು ಪಡೆದು ವಿವರಗಳನ್ನು ದಾಖಲಾತಿ ವಹಿಯಲ್ಲಿ ಸಿಬ್ಬಂದಿಗಳೆ ನೊಂದಣಿ ಮಾಡಿಕೊಂಡ ನಂತರವೇ ಅವರೊಂದಿಗೆ ವಿದ್ಯಾರ್ಥಿನಿಯರನ್ನು ಕಳುಹಿಸುವುದು. ಸಂದರ್ಶಕರ ವೇಳೆ ಮುಗಿದ ನಂತರ ಯಾವುದೇ ಕಾರಣಕ್ಕು ಅಪರಿಚಿತರನ್ನು ಅವರಣದಲ್ಲಿ ಇರಲು ಅವಕಾಶ ಕೊಡಬಾರದು.
16. ಪ್ರತಿ ತಂಗಳಿಗೊಮ್ಮೆ ಆಯಾ ಕ್ಷೇತ್ರ ವ್ಯಾಪ್ತಿಯ ಪೋಲೀಸ್ ಠಾಣಾಧಿಕಾರಿಗಳು ತಮ್ಮ ವ್ಯಾಪ್ತಿಗೆ ಬರುವ ಪ್ರಾಂಶುಪಾಲರು ಸಭೆಯನ್ನು ಆಯೋಜಿಸಿ, ದೂರುಗಳ ಬಗ್ಗೆ/ ಕಾಲೇಜುಗಳಿಲ್ಲನ ಭದ್ರತಾ ವ್ಯವಸ್ಥೆ ಕುರಿತು ಪರಿಶೀಲಿಸುವುದು.
17. ಒಂದು ವೇಳೆ ಕಾಲೇಜು ನಿರ್ಜನ ಪ್ರದೇಶದಲ್ಲಿದ್ದಲ್ಲಿ ಅಂತಹ ಕಡೆ ಪೋಲೀಸರ ಗಸ್ತನ್ನು ಹೆಚ್ಚಿಸಿ 'Point book' ಅಳವಡಿಸಿ ನಿಯಮಿತವಾಗಿ ಅದರಲ್ಲಿ ಭೇಟಿಯ ವಿವರಗಳನ್ನು ನಮೂಸುವುದು.
18. ಅಗತ್ಯವಿದ್ದಲ್ಲಿ ತಮ್ಮ ಹಂತದಲ್ಲಿಯೇ ಸುರಕ್ಷತೆಗಾಗಿ ಇನ್ನು ಹೆಚ್ಚಿನ ಕ್ರಮಕೈಗೊಳ್ಳಬಹುದು.

ಮೇಲೆ ಸೂಚಿಸಿರುವ ಎಲ್ಲಾ ಕ್ರಮಗಳನ್ನು ಬಾಲಕಿಯರು/ವಿದ್ಯಾರ್ಥಿನಿಯರ ಸುರಕ್ಷತೆಗಾಗಿ ಹಾಗೂ ಲೈಂಗಿಕ ಕಿರುಕುಳ, ಅತ್ಯಾಚಾರ ಮತ್ತು ಇತರೆ ದೌರ್ಜನ್ಯಗಳು ತಡೆಗಟ್ಟುವ ಕ್ರಮಗಳನ್ನು ಅಗತ್ಯವಾಗಿ ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ ಹಾಗೂ ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳು ಇದನ್ನು ಕಟ್ಟುನಿಟ್ಟಾಗಿ ಪಾಲಿಸಿ, ತೆಗೆದು ಕೊಂಡ ಕ್ರಮದ ಬಗ್ಗೆ ನಿರ್ದೇಶನಾಲಯಕ್ಕೆ ಹಾಗೂ ಸರ್ಕಾರಕ್ಕೆ ವರದಿಯನ್ನು ಕೂಡಲೇ ಮರುಟಾಪಲಿನಲ್ಲಿ ಸಲ್ಲಿಸುವುದು. ತಪ್ಪಿದಲ್ಲಿ ಅಂತಹ ಕಾಲೇಜುಗಳ ಮಾನ್ಯತೆಯನ್ನು ಯಾವುದೇ ಮುನ್ನಸೂಚನೆ ಇಲ್ಲದೇ ರದ್ಧಪಡಿಸಲು ಇಲಾಖೆ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು ಎಂದು ಕಟ್ಟುನಿಟ್ಟಿನ ಸೂಚನೆಯನ್ನು ನೀಡಿದೆ.

ನಿರ್ದೇಶಕರು.
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳು ಮುಂದಿನ ಸೂಕ್ತ ಕ್ರಮಕ್ಕಾಗಿ.

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮುಂದಿನ ಕ್ರಮಕ್ಕಾಗಿ

2. ರಾಜ್ಯದ ಎಲ್ಲಾ ಸರ್ಕಾರಿ/ ಖಾಸಗಿ ಅನುದಾನಿತ/ ಖಾಸಗಿ ಅನುದಾನ ರಹಿತ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರುಗಳ ಗಮನಕ್ಕೆ ತರಲು, ಜಿಲ್ಲಾ ಉಪನಿರ್ದೇಶಕರ ಮೂಲಕ ಮುಂದಿನ ಕ್ರಮಕ್ಕಾಗಿ.

ಪ್ರತಿಗಳನ್ನು ಮಾಹಿತಿಗಾಗಿ:-

3. ಸರ್ಕಾರದ ಆಧೀನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ(ಸಾಮಾನ್ಯ), ಬಹು ಮಹಡಿ ಕಟ್ಟಡ, ಬೆಂಗಳೂರು. ಇವರಿಗೆ ಮಾಹಿತಿಗಾಗಿ
4. ಕಛೇರಿ ಪ್ರತಿ.